# ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತ







## ಸಫಾಯಿ ಕರ್ಮಚಾರಿ ಪುನರ್ವಸತಿ ಯೋಜನೆ

ನಗರಾಭಿವೃದ್ಧಿ ಇಲಾಖೆ ಮತ್ತು ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗಳ ಮುಖೇನ ಗುರುತಿಸಿ ಜಿಲ್ಲಾಧಿಕಾರಿಗಳ/ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್ ರವರ ಅಧ್ಯಕ್ಷತೆಯಲ್ಲಿರುವ ಸಮಿತಿಯಿಂದ ಅನುಮೋದಿತವಾದ ಸಫಾಯಿ ಕರ್ಮಚಾರಿ ಮತ್ತು ಅವರ ಅವಲಂಬಿತರು ಈ ಯೋಜನೆಯಡಿ ಪರ್ಯಾಯ ಉದ್ಯೋಗ ಕೈಗೊಳ್ಳಲು ಆರ್ಥಿಕ ಚಟುವಟಿಕೆಗಳಿಗಾಗಿ ಸಾಲ ಸೌಲಭ್ಯ ಪಡೆಯಬಹುದು.

**ಸೌಲಭ್ಯ ಪಡೆಯಲು ಅರ್ಜಿದಾರರಿಗೆ ಇರಬೇಕಾದ ಅರ್ಹತೆಗಳು:-**

- ಅರ್ಜಿದಾರರು ಕನಿಷ್ಠ ಕಳೆದ 15 ವರ್ಷಗಳಿಂದ ಕರ್ನಾಟಕದಲ್ಲಿ ವಾಸಿಸುತ್ತಿರಬೇಕು.
- ಅರ್ಜಿದಾರರ ವಯಸ್ಸು 18 ರಿಂದ 60 ವರ್ಷಗಳ ಒಳಗಿರಬೇಕು.
- ಅರ್ಜಿದಾರರು ಈ ಹಿಂದೆ ನಿಗಮದಿಂದ ಯಾವುದೇ ಸೌಲಭ್ಯ ಪಡೆದಿರಬಾರದು.
- ಅರ್ಜಿದಾರರ ಕುಟುಂಬದ ವಾರ್ಷಿಕ ಆದಾಯವು ರೂ. 22,000/- ಮೀರಿರಬಾರದು.
- ಸಮೀಕ್ಷೆಯಲ್ಲಿ ಗುರುತಿಸಿದ ಸಫಾಯಿ ಕರ್ಮಚಾರಿ ಅಥವಾ ಅವರ ಅವಲಂಬಿತರಾಗಿರಬೇಕು.

**ಅರ್ಜಿಯೊಂದಿಗೆ ಸಲ್ಲಿಸಬೇಕಾದ ದಾಖಲೆಗಳು :-**

- ಪಾಸ್‌ಪೋರ್ಟ್ ಅಳತೆಯ ಇತ್ತೀಚಿನ ಭಾವಚಿತ್ರ-2
- ಜಾತಿ ಪ್ರಮಾಣ ಪತ್ರ
- ಆದಾಯ ಪ್ರಮಾಣ ಪತ್ರ
- ಪಡಿತರ ಚೀಟಿ
- ಗುರುತಿನ ಚೀಟಿ (ಆಧಾರ್ ಕಾರ್ಡ್/ಚುನಾವಣಾ ಗುರುತಿನ ಚೀಟಿ/ಡ್ರೈವಿಂಗ್‌ಲೈಸನ್ಸ್/ ಪಾನ್‌ಕಾರ್ಡ್/ಭಾವಚಿತ್ರವಿರುವ ಬ್ಯಾಂಕ್ ಪಾಸ್‌ಪುಸ್ತಕ/ಪಾಸ್‌ಪೋರ್ಟ್)
- ಆಗತ್ಯವಿರುವ ಲೈಸನ್ಸ್/ಪರವಾನಗಿ
- ದರಪಟ್ಟಿ ಮತ್ತು ಯೋಜನಾ ವರದಿ
- ಸಫಾಯಿ ಕರ್ಮಚಾರಿ ದೃಢೀಕರಣ ಪತ್ರ (ನಮೂನೆ-5)

**ಸ್ವಯಂ ಉದ್ಯೋಗ ಯೋಜನೆ**

- ರಾಷ್ಟ್ರೀಕೃತ / ಗ್ರಾಮೀಣ / ಶೆಡ್ಯೂಲ್ಡ್ ಬ್ಯಾಂಕುಗಳ ಸಹಯೋಗದೊಡನೆ ರೂ.1.00 ಲಕ್ಷ ದವರೆಗೆ ವಿವಿಧ ಆರ್ಥಿಕ ಚಟುವಟಿಕೆಗಳನ್ನು ಪ್ರಾರಂಭಿಸಿ ಸ್ವಯಂ ಉದ್ಯೋಗ ಕೈಗೊಳ್ಳಲು ಘಟಕ ವೆಚ್ಚದ ಶೇ.50 ರಷ್ಟು ಅಥವಾ ಗರಿಷ್ಟ ರೂ.25000/-ಸಹಾಯಧನ ಹಾಗೂ ಉಳಿದ ಮೊತ್ತವನ್ನು ಬ್ಯಾಂಕ್ ಸಾಲದೊಂದಿಗೆ ನೀಡಲಾಗುತ್ತಿದೆ..

**ಕೈಗೆತ್ತಿಕೊಳ್ಳಬಹುದಾದ ಆರ್ಥಿಕ ಚಟುವಟಿಕೆಗಳು;- (ಉದ್ದೇಶಗಳು)**

- ಕೃಷಿಯಾಧಾರಿತ ಚಟುವಟಿಕೆಗಳು, ಮೀನುಗಾರಿಕೆ, ಪಾನ್ ಅಂಗಡಿ, ಚಪ್ಪಲಿ ಅಂಗಡಿ, ಬ್ಯೂಟಿ ಪಾರ್ಲರ್, ಗೂಡಂಗಡಿ, ಫ್ಯಾನ್ಸಿ ಸ್ಟೋರ್, ಚಾಪೆ ತಯಾರಿಕೆ, ದಿನಸಿ ಅಂಗಡಿ, ಟೈಲರಿಂಗ್ ಶಾಪ್, ಹೈನುಗಾರಿಕೆ, ಬುಟ್ಟಿ ಹೆಣೆಯುವುದು, ರೆಡಿಮೇಡ್ ಗಾರ್ಮೆಂಟ್ಸ್, ಗುಡಿ ಕೈಗಾರಿಕೆ, ಬಡಗಿತನ, ಇತರೆ ಯಾವುದೇ ಸಣ್ಣ ವ್ಯಾಪಾರ.

**ಫಲಾನುಭವಿಗಳ ಆಯ್ಕೆ ವಿಧಾನ ಹಾಗೂ ಯೋಜನೆ ಅನುಷ್ಠಾನದ ವಿವಿಧ ಹಂತಗಳು:-**

- ನಿಗಮದ ತಾಲ್ಲೂಕು ಅಭಿವೃದ್ಧಿ ಅಧಿಕಾರಿಗಳು ಅರ್ಜಿದಾರರ ಸ್ಥಳ ಪರಿಶೀಲನೆ ಮಾಡಿ ಅರ್ಹರಿರುವ ಕುರಿತು ವರದಿ ಸಲ್ಲಿಸುವರು.
- ತಾಲ್ಲೂಕು ಅಭಿವೃದ್ಧಿ ಅಧಿಕಾರಿಗಳು ಸ್ಥಳ ಪರಿಶೀಲನೆ ಮಾಡಿ ಅರ್ಹರೆಂದು ವರದಿ ಸಲ್ಲಿಸಿದ ಅರ್ಜಿದಾರರು ಮೂಲ ದಾಖಲೆಗಳನ್ನು ಜಿಲ್ಲಾ ಕಛೇರಿಗೆ ಹಾಜರುಪಡಿಸಿ ಜಿಲ್ಲಾ ವ್ಯವಸ್ಥಾಪಕರಿಂದ ಧೃಢೀಕರಿಸಿದ ನಂತರ ಅರ್ಜಿಗಳನ್ನು ಫಲಾನುಭವಿಗಳು ಸೂಚಿಸಿದ ಬ್ಯಾಂಕ್ ಶಾಖೆಗಳಿಗೆ ಸಾಲ ಮಂಜೂರಾತಿಗೆ ಕಳುಹಿಸಿ ಫಲಾನುಭವಿಗಳಿಗೆ ಅಂಚೆ/ಎಸ್.ಎಮ್.ಎಸ್ ಮೂಲಕ ಮಾಹಿತಿ ಕೊಡಲಾಗುವುದು. ಅಥವಾ ಅರ್ಜಿದಾರರೇ ನೇರವಾಗಿ ನಿಗಮದ ಅಂತರ್ಜಾಲ ತಾಣದಲ್ಲಿ ಅರ್ಜಿ ಸಂಖ್ಯೆ ದಾಖಲಿಸಿ ತಿಳಿದುಕೊಳ್ಳಬಹುದು.
- ಅರ್ಜಿದಾರರು ಪ್ರಾರಂಭಿಸಲು ಉದ್ದೇಶಿಸಿರುವ ಘಟಕದ ಸ್ಥಾಪನೆಯ ಸಾಧ್ಯತೆ ಮತ್ತು ಆರ್ಥಿಕ ಸಿಂಧುತ್ವ ಆಧಾರಿಸಿ ಸಾಲ ಮಂಜೂರಾತಿ ನೀಡುವುದು ಆಯಾ ಬ್ಯಾಂಕಿನ ವ್ಯವಸ್ಥಾಪಕರ ವೈಯಕ್ತಿಕ ಜವಾಬ್ದಾರಿಯಾಗಿರುತ್ತದೆ. ಒಂದು ವೇಳೆ ಬ್ಯಾಂಕ್ ವ್ಯವಸ್ಥಾಪಕರು ವಿನಾ ಕಾರಣ ಅರ್ಜಿ ತಿರಸ್ಕರಿಸಿದಲ್ಲಿ, ನಿಗಮವು ಸೂಕ್ತ ಮಟ್ಟದಲ್ಲಿ ವ್ಯವಹರಿಸಿ ಫಲಾನುಭವಿಗೆ ನ್ಯಾಯ ಒದಗಿಸಲು ಸಹಕರಿಸುವುದು.
- ಬ್ಯಾಂಕ್‌ಗಳಿಂದ ಸಾಲ ಮಂಜೂರಾತಿ.
- ಸಹಾಯಧನ ಬಿಡುಗಡೆ ಕೋರಿ ನಿಗದಿತ ನಮೂನೆಯಲ್ಲಿ ಬ್ಯಾಂಕ್ ಶಾಖೆಗಳ ವ್ಯವಸ್ಥಾಪಕರು ನಿಗಮಕ್ಕೆ ಪ್ರಸ್ತಾವನೆ ಸಲ್ಲಿಸುವರು.
- ನಿಗಮದಿಂದ ಸಂಬಂಧಿಸಿದ ಬ್ಯಾಂಕ್ ಶಾಖೆಗಳಿಗೆ ನಿಯಮಾನುಸಾರ ಸಹಾಯಧನ ಬಿಡುಗಡೆ ಮಾಡಲಾಗುವುದು.
- ಬ್ಯಾಂಕ್ ವತಿಯಿಂದ ಮಂಜೂರು ಮಾಡಿದ ಸಾಲದ ಮೊತ್ತದೊಂದಿಗೆ ನಿಗಮದಿಂದ ಬಿಡುಗಡೆ ಮಾಡಿದ ಸಹಾಯಧನದ ಮೊಬಲಗನ್ನು ಒಟ್ಟಿಗೆ ಸೇರಿಸಿ ಉತ್ಪಾದಕ ಘಟಕವನ್ನು ಸ್ಥಾಪಿಸಲು ಫಲಾನುಭವಿಗೆ/ಸರಬರಾಜುದಾರರಿಗೆ ಸಂಬಂಧಿಸಿದ ಬ್ಯಾಂಕ್ ಶಾಖೆಯು ಬಿಡುಗಡೆ ಮಾಡುತ್ತದೆ.
- ನಿಗಮದ ತಾಲ್ಲೂಕು ಅಭಿವೃದ್ಧಿ ಅಧಿಕಾರಿಗಳು ನಿಗಮದ ಸಹಾಯಧನ ಹಾಗೂ ಬ್ಯಾಂಕ್ ಸಾಲವನ್ನು ನಿಗದಿತ ಉದ್ದೇಶಕ್ಕೆ ಫಲಾನುಭವಿಯು ಬಳಕೆ ಮಾಡಿ ಉತ್ಪಾದಕ ಘಟಕ ಪ್ರಾರಂಭಿಸಿರುವ ಕುರಿತು ಸ್ಥಳ ಪರಿಶೀಲನಾ ವರದಿಯನ್ನು ಜಿಲ್ಲಾ ಕಛೇರಿಗೆ ಸಲ್ಲಿಸುವರು. ನಿಗಮದಿಂದ ಬಿಡುಗಡೆ ಮಾಡಲಾದ ಸಹಾಯಧನವನ್ನು ನಿಗದಿತ ಉದ್ದೇಶಕ್ಕೆ ವಿನಿಯೋಗಿಸಿರುವ ಕುರಿತು ಬ್ಯಾಂಕ್ ವ್ಯವಸ್ಥಾಪಕರಿಂದ ಸಹಾಯಧನ ವಿನಿಯೋಗ ಪ್ರಮಾಣ ಪತ್ರ ಪಡೆಯುವುದು.

**ನೇರ ಸಾಲ ಯೋಜನೆ**

- ರಾಷ್ಟ್ರೀಯ ಸಫಾಯಿ ಕರ್ಮಚಾರಿ ಹಣಕಾಸು ಅಭಿವೃದ್ಧಿ ನಿಗಮದ ಸಹಯೋಗದೊಡನೆ ನೇರಸಾಲವಾಗಿ ರೂ. 1.00 ಲಕ್ಷದ ಮಿತಿಯೊಳಗಿನ ಘಟಕಗಳಿಗೆ ಶೇ.50 ರಷ್ಟು ಅಥವಾ ಗರಿಷ್ಟ ರೂ.10000/- ಸಹಾಯಧನ ಹಾಗೂ ಉಳಿದ ಮೊತ್ತ ಅವಧಿ ಸಾಲವಾಗಿರುತ್ತದೆ. ರೂ. 1.00 ಲಕ್ಷ ಮೇಲ್ಪಟ್ಟ ಘಟಕಗಳಿಗೆ ಶೇ.5 ರ ಬೀಜಧನ, ಶೇ.5 ರ ಫಲಾನಭವಿಗಳ ವಂತಿಗೆ ಹಾಗೂ ಉಳಿದ ಶೇ.90 ರ ಅವಧಿ ಸಾಲದೊಂದಿಗೆ ಆರ್ಥಿಕ ನೆರವು ನೀಡಿ ವಿವಿಧ ಆರ್ಥಿಕ ಚಟುವಟಿಕೆಗಳನ್ನು ಪ್ರಾರಂಭಿಸಲು ಅನುಷ್ಠಾನಗೊಳಿಸಲಾಗುತ್ತಿದೆ.

**ಕೈಗೆತ್ತಿಕೊಳ್ಳಬಹುದಾದ ಆರ್ಥಿಕ ಚಟುವಟಿಕೆಗಳು;- (ಉದ್ದೇಶಗಳು)**

- ಆಟೋರಿಕ್ಷಾ , ಟ್ರ್ಯಾಕ್ಟರ್ ಮತ್ತು ಟ್ರೈಲರ್, ಸಾರಿಗೆ ವಾಹನ, ಸರಕು ಸಾಗಣೆ ವಾಹನ, ಸಕ್ಕಿಂಗ್ ಮಷಿನ್, ಕಸ ಸಾಗಣೆ ವಾಹನ ಇತ್ಯಾದಿ ಚಟುವಟಿಕೆಗಳು

**ಯೋಜನೆ ಅನುಷ್ಠಾನದ ವಿವಿಧ ಹಂತಗಳು:-**

- ನಿಗಮದ ತಾಲ್ಲೂಕು ಅಭಿವೃದ್ಧಿ ಅಧಿಕಾರಿಗಳು ಅರ್ಜಿದಾರರ ಸ್ಥಳ ಪರಿಶೀಲನೆ ಮಾಡಿ ಅರ್ಹರಿರುವ ಕುರಿತು ಜಿಲ್ಲಾ ಕಛೇರಿಗೆ ವರದಿ ಸಲ್ಲಿಸುವರು.
- ತಾಲ್ಲೂಕು ಅಭಿವೃದ್ಧಿ ಅಧಿಕಾರಿಗಳು ಸ್ಥಳ ಪರಿಶೀಲನೆ ಮಾಡಿ ಅರ್ಹರೆಂದು ವರದಿ ಸಲ್ಲಿಸಿದ ಅರ್ಜಿದಾರರು ಮೂಲ ದಾಖಲೆಗಳನ್ನು ಜಿಲ್ಲಾ ಕಛೇರಿಗೆ ಹಾಜರುಪಡಿಸಿ ಜಿಲ್ಲಾ ವ್ಯವಸ್ಥಾಪಕರಿಂದ ಧೃಢೀಕರಿಸಿದ ನಂತರ ಅರ್ಜಿಗಳನ್ನು ಕೇಂದ್ರ ಕಛೇರಿಗೆ ಸಾಲ ಮಂಜೂರಾತಿಗೆ ಕಳುಹಿಸಿ ಕೊಡಲಾಗುವುದು.
- ಕೇಂದ್ರ ಕಛೇರಿಯಿಂದ ಮಂಜೂರಾತಿ ಆದೇಶ ಬಂದ ನಂತರ ಅವಧಿಸಾಲ ಮತ್ತು ಬೀಜಧನ ಸಾಲದ ಮೊತ್ತಕ್ಕೆ ಸಂಬಂಧಿಸಿದಂತೆ ಛಾಪಾ ಕಾಗದದಲ್ಲಿ ದಾಖಲೆಗಳು ಹಾಗೂ ಕ್ರಾಸ್ ಮಾಡಿದ 10 ಚೆಕ್ ಹಾಳೆಗಳನ್ನು ಆಯಾ ಜಿಲ್ಲೆಯ ಜಿಲ್ಲಾ ವ್ಯವಸ್ಥಾಪಕರು, ಡಾ. ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ ಇವರ ಹೆಸರಿಗೆ ಬರೆದು ದಿನಾಂಕ ಹಾಗೂ ಮೊತ್ತ ನಮೂದಿಸದೆ ಸಹಿ ಮಾಡಿ ಸಲ್ಲಿಸಬೇಕು.
- ನಿಗಮದಿಂದ ಪಡೆಯುವ ಬೀಜಧನಸಾಲ ಹಾಗೂ ಅವಧಿಸಾಲಕ್ಕೆ ಜಾಮೀನು ನೀಡಬೇಕು.
- ಪೂರಕ ಭದ್ರತೆಯಾಗಿ ನಿಗದಿಪಡಿಸಿದ ಮೊತ್ತಕ್ಕೆ ಫಲಾನುಭವಿಯ ಅಥವಾ ಮೂರನೇ ವ್ಯಕ್ತಿಗೆ ಸಂಬಂಧಿಸಿದ ಸ್ಥಿರಾಸ್ಥಿಯನ್ನು (ಕಟ್ಟಡ/ನಿವೇಶನ/ಜಮೀನು) ನಿಗಮಕ್ಕೆ ಆಧಾರ ಮಾಡಬೇಕು ಅಥವಾ ಜೀವವಿಮಾ ಪಾಲಿಸಿ/ನಿಗದಿತ ಠೇವಣಿ/ಎನ್.ಎಸ್.ಸಿ ಗಳನ್ನು ನಿಗಮಕ್ಕೆ ಲೀನ್ ಮಾಡಿಕೊಡಬೇಕು.
- ವಾರಸುದಾರರನ್ನು ನೇಮಿಸಬೇಕು. (ಒಂದು ವೇಳೆ ಫಲಾನುಭವಿಯು ಮರಣ ಹೊಂದಿದಲ್ಲಿ ಸಾಲವನ್ನು ತೀರಿಸುವ ಜವಾಬ್ದಾರಿ ಹೊರುವವರು.)
- ಶೇ. 5 ರ ಮೊತ್ತಕ್ಕೆ ಫಲಾನುಭವಿಯು ನಿಗಮದ ಹೆಸರಿಗೆ ಡಿಮಾಂಡ್ ಡ್ರಾಫ್ಟ್ ಸಲ್ಲಿಸಬೇಕು.
- ಆಯಾ ಉದ್ದೇಶಕ್ಕೆ ನಿಗದಿಯಾದ ಮಾರ್ಗಸೂಚಿಯಂತೆ ಘಟಕ ಸ್ಥಾಪಿಸಲು ಆಗತ್ಯವಿರುವಷ್ಟು ಹಣಕಾಸನ್ನು ನಿಗಮವು ಫಲಾನುಭವಿಗೆ ಒಂದೇ ಕಂತಿನಲ್ಲಿ/ಹಲವು ಕಂತುಗಳ ಮೂಲಕ ಬಿಡುಗಡೆ ಮಾಡುವುದು.

| ನೇರಸಾಲ ಯೋಜನೆಯಡಿ ಒದಗಿಸಬೇಕಾದ ಪೂರಕ ಭದ್ರತೆಯ ವಿವರ (ರೂಪಾಯಿಗಳಲ್ಲಿ) | | | |
|---|---|---|---|
| ಕ್ರ.ಸಂ | ಇಂದ | ವರೆಗೆ | ಘಟಕ ವೆಚ್ಚದ ಶೇಕಡ |
| 1 | | 35000 | ಇಲ್ಲ |
| 2 | 35001 | 100000 | 10 |
| 3 | 100001 | 250000 | 15 |
| 4 | 250001 | 500000 | 20 |
| 5 | 500001 | 700000 | 25 |
| 6 | 700000 ಮೇಲ್ಪಟ್ಟು | | 50 |

- ಕಂತುಗಳಲ್ಲಿ ಬಿಡುಗಡೆ ಮಾಡುವ ಹಣವನ್ನು ಫಲಾನುಭವಿಯು ಸಮರ್ಪಕವಾಗಿ ನಿಗದಿತ ಉದ್ದೇಶಕ್ಕೆ ಬಳಸಿರುವ ಕುರಿತು ತಾ.ಅ.ಅ.ಗಳಿಂದ ಸ್ಥಳ ಪರಿಶೀಲನಾ ವರದಿ ಪಡೆದು ಮುಂದಿನ ಕಂತುಗಳನ್ನು ಬಿಡುಗಡೆ ಮಾಡುವುದು.
- ಈ ಯೋಜನೆಯಡಿ ಸೃಷ್ಟಿಸಲಾದ ಸ್ವತ್ತನ್ನು ಸಮಗ್ರ ವಿಮೆಗೊಳಪಡಿಸುವುದು ಕಡ್ಡಾಯವಾಗಿರುತ್ತದೆ.
- ಫಲಾನುಭವಿಯು ಉತ್ಪಾದಕ ಘಟಕವನ್ನು ಸ್ಥಾಪಿಸಿ ನಿಗಮಕ್ಕೆ ಮಾಹಿತಿ ನೀಡುವುದು.

- ನಿಗಮದ ತಾಲ್ಲೂಕು ಅಭಿವೃದ್ಧಿ ಅಧಿಕಾರಿಗಳು ನಿಗಮದ ಸಹಾಯಧನ/ಬೀಜಧನ ಹಾಗೂ ಎನ್.ಎಸ್.ಕೆ.ಎಫ್.ಡಿ.ಸಿ ಅವದಿ ಸಾಲವನ್ನು ನಿಗದಿತ ಉದ್ದೇಶಕ್ಕೆ ಫಲಾನುಭವಿಯು ಬಳಕೆ ಮಾಡಿ ಉತ್ಪಾದಕ ಘಟಕ ಪ್ರಾರಂಭಿಸಿರುವ ಕುರಿತು ಸ್ಥಳ ಪರಿಶೀಲನಾ ವರದಿಯನ್ನು ಜಿಲ್ಲಾ ಕಛೇರಿಗೆ ಸಲ್ಲಿಸುವರು.
- ನಿಗಮದಿಂದ ಬಿಡುಗಡೆ ಮಾಡಲಾದ ಸಹಾಯಧನ/ಬೀಜಧನ ಹಾಗೂ ಎನ್.ಎಸ್.ಎಫ್.ಡಿ.ಸಿ ಅವದಿ ಸಾಲವನ್ನು ನಿಗದಿತ ಉದ್ದೇಶಕ್ಕೆ ವಿನಿಯೋಗಿಸಿರುವ ಕುರಿತು ನಿಗಮದ ಕೇಂದ್ರ ಕಛೇರಿಗೆ ನಿಗದಿತ ನಮೂನೆಯಲ್ಲಿ ಸಹಾಯಧನ/ಬೀಜಧನ ಹಾಗೂ ಎನ್.ಎಸ್.ಕೆ.ಎಫ್.ಡಿ.ಸಿ ಅವದಿ ಸಾಲ ವಿನಿಯೋಗ ಪ್ರಮಾಣ ಪತ್ರ ಸಲ್ಲಿಸುವುದು.

**<u>ಮೈಕ್ರೋ ಕ್ರೆಡಿಟ್ ಪೈನಾನ್ಸ್ (ಗುಂಪು ಯೋಜನೆ)</u>**

ಸ್ವ-ಸಹಾಯ ಸಂಘದ ಸದಸ್ಯರಿಗೆ ಸಣ್ಣ ಪ್ರಮಾಣದ ಆರ್ಥಿಕ ಚಟುವಟಿಕೆಗಳನ್ನು ಪ್ರಾರಂಬಿಸಲು ನಗರಾಭಿವೃದ್ಧಿ ಇಲಾಖೆಯು ನೀಡುವ ಸಹಾಯಧನದೊಂದಿಗೆ ಅವಧಿ ಸಾಲ ನೀಡಲಾಗುತ್ತಿದೆ.

[[

**<u>ಸೌಲಭ್ಯ ಪಡೆಯಲು ಸ್ವ-ಸಹಾಯ ಸಂಘಕ್ಕೆ ಇರಬೇಕಾದ ಅರ್ಹತೆಗಳು:-</u>**

- ಗುಂಪಿನ ಸದಸ್ಯರೆಲ್ಲರೂ ಸಫಾಯಿ ಕರ್ಮಚಾರಿ ಅಥವಾ ಅವರ ಅವಲಂಬಿತರಾಗಿರಬೇಕು.
- ಸಂಘ ಪ್ರಾರಂಭವಾಗಿ 5 ವರ್ಷಗಳಾಗಿರಬೇಕು.
- ಸ್ವಸಹಾಯ ಸಂಘವು ರಾಷ್ಟ್ರೀಕೃತ / ಗ್ರಾಮೀಣ / ಶೆಡ್ಯೂಲ್ಡ್ ಬ್ಯಾಂಕ್ ನಲ್ಲಿ ಖಾತೆ ಹೊಂದಿದ್ದು, ಸಾಕಷ್ಟು ವಹಿವಾಟು ನಡೆಸಿ ಹೆಚ್ಚಿನ ಮೊತ್ತವನ್ನು ಖಾತೆಯಲ್ಲಿ ಇರಿಸಿರಬೇಕು.
- ಸ್ವಸಹಾಯ ಗುಂಪಿನಲ್ಲಿ ಕನಿಷ್ಟ 10 ಹಾಗೂ ಗರಿಷ್ಟ 20 ಸದಸ್ಯರ ಮಿತಿಯೊಳಗಿರಬೇಕು .

**<u>ಯೋಜನೆ ಅನುಷ್ಠಾನದ ವಿವಿಧ ಹಂತಗಳು:-</u>**

- ಅರ್ಜಿದಾರರ ಅರ್ಹತೆ ಆಧರಿಸಿ ಅರ್ಜಿದಾರರು ಸಲ್ಲಿಸಿದ ದಾಖಲೆಗಳನ್ನು ಜಿಲ್ಲಾ ವ್ಯವಸ್ಥಾಪಕರಿಂದ ಧೃಢೀಕರಿಸಿ ವರದಿಯೊಂದಿಗೆ ಸಾಲ ಮಂಜೂರಾತಿಗೆ ಕೇಂದ್ರ ಕಛೇರಿಗೆ ಕಳುಹಿಸಲಾಗುತ್ತದೆ.
- ಕೇಂದ್ರ ಕಛೇರಿಯಿಂದ ಮಂಜೂರಾತಿ ಆದೇಶ ಬಂದ ನಂತರ ಅವಧಿಸಾಲ ಮತ್ತು ಬೀಜಧನ ಸಾಲದ ಮೊತ್ತಕ್ಕೆ ಸಂಬಂಧಿಸಿದಂತೆ ಛಾಪಾ ಕಾಗದದಲ್ಲಿ ದಾಖಲೆಗಳನ್ನು ಸಲ್ಲಿಸಬೇಕು.
- ಸ್ವಸಹಾಯ ಸಂಘಗಳಿಗೆ ನಿಗಮದಿಂದ ಹಣಕಾಸು ಬಿಡುಗಡೆ ಮಾಡಿದ ನಂತರ ಆಯಾ ಸಂಘಗಳು ಫಲಾನುಭವಿಗಳಿಗೆ ಹಣ ಬಿಡುಗಡೆ ಮಾಡಿ ನಿಗಮಕ್ಕೆ ವಿವರಗಳನ್ನು ಸಲ್ಲಿಸಬೇಕು.







